ಅಸಲು ದಾವಾ ಸಂಖ್ಯೆ- 312/2018
ಪಿಡಬ್ಲ್ಯೂ- 01
ದಿನಾಂಕಃ 18.01.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.
ಮಧ್ಯಂತರ ಅರ್ಜಿ ನಂ.7 ರ ಆದೇಶದ ಮೇರೆಗೆ ಸಾಕ್ಷಿಯನ್ನು ಪುನಃ ಕರೆಯಿಸಲಾಯಿತು.
<u>ಮುಂದುವರೆದ ಮುಖ್ಯ ವಿಚಾರಣೆ - ಶ್ರೀ ಎಂ ಎಂ ಪಿ ವಕೀಲರಿಂದ.</u>

ನಾನು ಈ ಕೆಳಕಂಡ ದಸ್ತಾವೇಜುಗಳನ್ನು ಹಾಜರು ಪಡಿಸಿದ್ದೇನೆ.

ನನ್ನ ಜನನ ಪ್ರಮಾಣಪತ್ರ ಹಾಜರುಪಡಿಸಿದ್ದೇನೆ , ಈ ಹಂತದಲ್ಲಿ " ಪ್ರತಿವಾದಿ ಪರ ವಕೀಲರಾದ ಎಸ್ ಆರ್ ಹೆಚ್ ವಕೀಲರು ಸದರಿ ದಾಖಲೆಯನ್ನು ಈ ದಾವೆ ಚಾಲ್ತಿಯಲ್ಲಿದ್ದಾಗ ನ್ಯಾಯಾಲಯದಲ್ಲಿ ಕ್ರಿಮಿನಲ್ ಮಿಸಲೆನಿಯಸ್ ದಾಖಲಿಸಿ ಸೃಷ್ಟಿಮಾಡಿಕೊಂಡಿರುತ್ತಾರೆ. ಆದ್ದರಿಂದ ನಿಶಾನೆ ಅಂತಾ ಗುರುತಿಸಬಾರದು " ಅಂತಾ ತಕರಾರು ಮಾಡಿರುತ್ತಾರೆ. ವಾದಿ ಪರ ವಕೀಲರು ವಾದಿಯ ಹೆಸರು ಮತ್ತು ಜನ್ಮ ದಿನಾಂಕ ಶಾಲಾ ದಾಖಲಾತಿಯ ಪ್ರಕಾರ ನ್ಯಾಯಾಲಯದ ಆದೇಶದ ಮೇರೆಗೆ ನೊಂದಣಿ ಮಾಡಿಸಿದ್ದು ಅದನ್ನು ಪರಿಗಣಿಸಬಹುದು ಅಂತಾ ವಾದ ಮಂಡಿಸಿರುತ್ತಾರೆ. ಸದರಿ ದಾಖಲೆಯನ್ನು ಪರಿಗಣಿಸಬೇಕೋ ಅಥವಾ ಇಲ್ಲವೋ ಅಂತಾ ತೀರ್ಪಿನಲ್ಲಿ ಚರ್ಚಿಸಬಹುದು ಮತ್ತು ಈ ಕುರಿತು ಪ್ರತಿವಾದಿಯರು ಸಾಕ್ಷಿಯನ್ನು ಪಾಟೀ ಸವಾಲಿಗೆ ಒಳಪಡಿಸಬಹುದು. ಆದ್ದರಿಂದ ಸದರಿ ದಾಖಲೆಯನ್ನು ನೈಜತೆಯ ತಕರಾರಿಗೆ ಒಳಪಟ್ಟು ನಿಶಾನೆ ಅಂತಾ ಗುರುತಿಸಬಹುದಾಗಿದೆ. ಆದ್ದರಿಂದ ಸದರಿ ದಾಖಲೆಯನ್ನು ನೈಜತೆಯ ತಕರಾರಿಗೆ ಒಳಪಟ್ಟು ನಿಪಿ-7 ಅಂತಾ ಗುರುತಿಸಲಾಯಿತು.

ನನ್ನ ಆದಾಯ ದೃಡಿಕರಣ ಪತ್ರ ಹಾಜರುಪಡಿಸಿದ್ದು ಅದನ್ನು ನಿಪಿ-8 ಅಂತಾ ಗುರುತಿಸಲಾಯಿತು.

ಹಿಂದುಳಿದ ವರ್ಗಕ್ಕೆ ಸೇರಿದ ಅಭ್ಯರ್ಥಿಗೆ ನೀಡುವ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-9 ಅಂತಾ ಗುರುತಿಸಲಾಯಿತು.

<u>ಪಾಟೀ ಸವಾಲುಃ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು **200** ರೂಪಾಯಿ ಖರ್ಚಿನೊಂದಿಗೆ ನೀಡಲಾಯಿತು.</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು